

ಚಿತ್ರ: ವಿಶ್ವನಾಥ ಸುವರ್ಣ

ರವಾನೆಯಾಗುತ್ತವೆ. ಏಕಕಾಲಕ್ಕೆ ಹೀಗೆ ಎರಡೆರಡು ದೃಶ್ಯಗಳು ಬಾರದಂತೆ ತಡೆಯಲು, ಮಿದುಳು, ಓರೆಯಾದ ಕಣ್ಣಿನಿಂದ ಬರುವ ದೃಶ್ಯವನ್ನು ತಿರಸ್ಕರಿಸುವ ಸಾಧ್ಯತೆ ಇರುತ್ತದೆ. ಈ ಕಾರಣದಿಂದ ಓರೆ ಕಣ್ಣಿನಲ್ಲಿ ಜಡತ್ವ ಉಂಟಾಗುವ ಸಾಧ್ಯತೆ ಹೆಚ್ಚು. ಮೆಳ್ಳೆಗಣ್ಣಿನ ಸಮಸ್ಯೆ ಯಾವ ಪ್ರಮಾಣದಲ್ಲಿದೆ ಎಂಬುದನ್ನು ನೋಡಿಕೊಂಡು ಅದಕ್ಕೆ ಶಸ್ತ್ರಚಿಕಿತ್ಸೆ ಅಗತ್ಯವೋ ಅಥವಾ ಕನ್ನಡಕ ಸಾಕೋ ಎಂಬುದನ್ನು ನಿರ್ಧರಿಸಲಾಗುತ್ತದೆ. ಎರಡೂ ಕಣ್ಣುಗಳ ಮಧ್ಯೆ ಹೊಂದಾಣಿಕೆ ಉಂಟುಮಾಡಲು ಕೆಲವೊಮ್ಮೆ ವ್ಯಾಯಮ ಕೂಡ ಸಾಕಾಗುತ್ತದೆ. ಎಂತಹ ಮೆಳ್ಳೆಗಣ್ಣಿನ ಸಮಸ್ಯೆಯಿದ್ದರೂ ಅದಕ್ಕೆ ಪರಿಹಾರವಿದೆ ಎನ್ನುತ್ತಾರೆ ವೈದ್ಯರು.

## ಕಣ್ಣಿನ ಕ್ಯಾನ್ಸರ್

ರೆಟಿನೋಬ್ಲಾಸ್ಟೋಮಾ ಎಂಬ ಟ್ಯೂಮರ್ (ದುರ್ಮಾಂಸ) ಸಹ ಮಕ್ಕಳ ಕಣ್ಣಿನಲ್ಲಿ ಕಾಣಿಸಿಕೊಳ್ಳಬಹುದು. ಇದಕ್ಕೆ ಕಣ್ಣಿನ ಕ್ಯಾನ್ಸರ್ ಅಂತಲೂ ಹೇಳಲಾಗುತ್ತದೆ. ಟ್ಯೂಮರ್ ದೊಡ್ಡದಾಗಿ ಬೆಳೆಯುವ ಮುನ್ನವೇ ಪತ್ತೆ ಮಾಡಿದರೆ ದೃಷ್ಟಿಭಾಗ್ಯವನ್ನು ಉಳಿಸಿಕೊಳ್ಳಲು ಸಾಧ್ಯವಿದೆ. ಈ ಸಮಸ್ಯೆಗೆ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಕಿಮೊಥೆರಪಿ ಚಿಕಿತ್ಸೆ ನೀಡಲಾಗುತ್ತದೆ. ಪರಿಹಾರ ಲಭ್ಯವಿದ್ದರೂ ಮಕ್ಕಳ ಕಣ್ಣಿನ ಕ್ಯಾನ್ಸರ್ ಪ್ರಮಾಣವೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಜಾಗೃತಿ ಕೊರತೆಯೇ ಇದಕ್ಕೆ ಕಾರಣ ಎಂಬುದು ವೈದ್ಯರ ವಿಶ್ಲೇಷಣೆ.

ಪ್ರಪಂಚದಲ್ಲಿ ಅಂಧರ ಸಂಖ್ಯೆ ಹೆಚ್ಚಾಗಿರುವ ದೇಶಗಳಲ್ಲಿ ಭಾರತ ಮುಂಚೂಣಿಯಲ್ಲಿದೆ. ಆದರೆ, ದೃಷ್ಟಿದೋಷ ನಿವಾರಣೆಗೆ ಬೇಕಾದಷ್ಟು ವೈದ್ಯರು ಇಲ್ಲಿಲ್ಲ. ದೇಶಕ್ಕೆ ಕನಿಷ್ಠ 1.25 ಲಕ್ಷ ನೇತ್ರತಜ್ಞರ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಲಭ್ಯವಿರುವುದು ಮಾತ್ರ 45 ಸಾವಿರ ವೈದ್ಯರು.

## 3-ಡಿ ಕರಾಮತ್ತು

3–ಡಿ ಫಿಲಂಗಳು, ಆಟಗಳು ಹಾಗೂ ಚಿತ್ರಗಳು ಸಹ ಮಕ್ಕಳ ಕಣ್ಣಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ ಎನ್ನುತ್ತದೆ ಫ್ರೆಂಚ್ ಹೆಲ್ತ್ ಏಜೆನ್ಸಿ ಸಂಶೋಧನಾ ವರದಿ. ಆರು ವರ್ಷದೊಳಗಿನ ಮಕ್ಕಳಿಗೆ ಯಾವುದೇ ವಿಧದ 3–ಡಿ ಪರಿಕರವನ್ನು ತೋರಿಸಬಾರದು ಹಾಗೂ 6ರಿಂದ 13ವರ್ಷದೊಳಗಿನ ಮಕ್ಕಳಿಗೆ ನಿಯಂತ್ರಿತ 3–ಡಿ ಮನರಂಜನೆಗೆ ಮಾತ್ರ ಅವಕಾಶ ನೀಡಬೇಕು ಎಂದು ಸಂಶೋಧಕರು ಸಲಹೆ ಮಾಡಿದ್ದಾರೆ.

## ಕನ್ನಡಕ ಹೇಗಿರಬೇಕು?

ಕನ್ನಡಕಗಳು ಸರಿಪಡಿಸುವಂತಹ ದೃಷ್ಟಿದೋಷದಲ್ಲಿ ಎರಡು ಬಗೆಯಿವೆ. ಒಂದು ಸಮೀಪ ದೃಷ್ಟಿದೋಷವಾದರೆ, ಮತ್ತೊಂದು ದೂರ ದೃಷ್ಟಿದೋಷ. ಮಗುವಿನಲ್ಲಿ ದೃಷ್ಟಿದೋಷ ಯಾವ ಪ್ರಮಾಣದಲ್ಲಿದೆ ಎಂಬುದರ ಆಧಾರ ಮೇಲೆ ಅದು ಪ್ರತಿದಿನ ಎಷ್ಟು ಸಮಯದವರೆಗೆ ಕನ್ನಡಕ ಧರಿಸಬೇಕು ಎನ್ನುವುದು ನಿರ್ಧಾರವಾಗುತ್ತದೆ. ವೈದ್ಯರು ಕೆಲವು ಮಕ್ಕಳಿಗೆ ಬೆಳಿಗ್ಗೆ ಎದ್ದೊಡನೆ ಹಾಕಿದ ಕನ್ನಡಕವನ್ನು ರಾತ್ರಿ ಮಲಗುವಾಗಲೇ ತೆಗೆಯಲು ಹೇಳುತ್ತಾರೆ. ಕೆಲವು ಮಕ್ಕಳಿಗೆ ಕ್ಲಾಸ್‌ರೂಂನಲ್ಲಿ ಇದ್ದಾಗ ಮಾತ್ರ ಬಳಸಲು ಸಲಹೆ ನೀಡುತ್ತಾರೆ.

ಮಕ್ಕಳಿಗೆ ಸೂಕ್ತವಾದ ಕನ್ನಡಕಗಳನ್ನು ಆಯ್ಕೆ ಮಾಡುವುದು ಹೇಗೆ? ಕೆಲವೊಂದು ಟಿಪ್ಸ್‌ಗಳು ಇಲ್ಲಿವೆ:

ಫ್ರೇಮ್‌ಗಳನ್ನು ಆಯ್ಕೆಮಾಡುವ ಮುನ್ನ ಲೆನ್ಸ್‌ಗಳ ಗಾತ್ರದ ಬಗೆಗೆ ತಿಳಿದುಕೊಳ್ಳಿ. ವೈದ್ಯರು ದಪ್ಪಗಾತ್ರದ ಲೆನ್ಸ್‌ಗೆ ಸಲಹೆ ನೀಡಿದ್ದರೆ, ಫ್ರೇಮ್ ಕೂಡ ಅದಕ್ಕೆ ತಕ್ಕಂತೆ ಇರಬೇಕಾಗುತ್ತದೆ. ನೀವು ಮೊದಲೇ ಫ್ರೇಮ್ ಆಯ್ಕೆ ಮಾಡಿದರೆ, ಆಪ್ಟಿಷಿಯನ್‌ಗಳು ಅದೇ ಫ್ರೇಮ್‌ಗೆ ಲೆನ್ಸ್ ಕೂರಿಸುವಾಗ ಅದರ ದಪ್ಪ ಕಡಿಮೆ ಮಾಡಲು ಹೋಗಿ ಕನ್ನಡಕದ ಅಂಚಿನಲ್ಲಿ ದೃಷ್ಟಿ ಮಸುಕಾಗುವ ಸಂಭವ ಇದೆ. ಶಾಲೆಯಲ್ಲಿ ಮಗು ಎಂತಹ ಕನ್ನಡಕ ಧರಿಸಿದರೂ ಗೋಳು ಹೊಯ್ದುಕೊಳ್ಳುವ ತುಂಟ ಮಕ್ಕಳಿಗೆ ಕೊರತೆಯಿಲ್ಲ. ಹೀಗಾಗಿ ಮಗು ಕನ್ನಡಕ ಹಾಕುವಂತೆ ಪ್ರೇರೇಪಿಸುವ ರೀತಿಯಲ್ಲಿ ಫ್ರೇಮ್ ಇದ್ದರೆ ಚೆನ್ನ. ಹಾಗೆಯೇ ಮಕ್ಕಳಿಗೆ ತುಂಬಾ ದುಬಾರಿಯಾದ ಫ್ರೇಮ್‌ಗಳನ್ನು ಖರೀದಿಸುವುದು ಬೇಡ.